‘ಧಾರವಾಡದ ಯಾವುದೇ ಮೂಲೆಯಲ್ಲಿ ನಿಂತು ಯಾರೇ ಕಲ್ಲು ಒಗೆದರೂ ಅದು ಕವಿಯೊಬ್ಬನ ಮನೆಯ ಮೇಲೆಯೇ ಬೀಳುತ್ತದೆ..!’ ಈ ಮಾತು ಆತನಿಗೆ ಧಾರವಾಡ ಸೇರುವ ಮೊದಲೇ ಕಾಡುತ್ತಿತ್ತಾದರೂ ಧಾರವಾಡವಾಸಿಯಾದ ನಂತರವಂತೂ ಇವನ ನಿತ್ಯಚಿಂತನಾಲಹರಿಯ ಬಿಡದ ಒಂದು ಭಾಗವಾಗಿಯೇ ಬಿಟ್ಟಿತ್ತು. ಅಷ್ಟೇ ಏಕೆ, ಹುಚ್ಚಾಗಿಯೂ ಲಗತ್ತಾಗಿತ್ತು. ಒಂದೊಮ್ಮೆ ಆರಂಭದ ತನ್ನ ಅಲೆದಾಟದ ಹೊತ್ತಲ್ಲಿ ಸಾಧನಕೇರಿಯ ಕೆರಿಯಾಚೆ ನಿಂತು ಒಂದು ಕಲ್ಲನ್ನು ಜೋರಾಗಿ ಬೀಸಿ ಒಗೆದದ್ದೂ ಜರುಗಿ ಆ ಕಲ್ಲು ಎಲ್ಲಿ ಹೋತು, ಯಾರ ಮನೆ ಮೇಲೆ ಬಿತ್ತು... ಎಂಬ ಬಗ್ಗೆ ನಿಖರ ಮಾಹಿತಿ ಕೊನೆಗೂ ಆತನಿಗೆ ಸಿಗಲೇ ಇಲ್ಲ. ಅವಾಗ ಈ ಕಲ್ಲು ಎಸೆಯುವ ಕೆಲಸವನ್ನು ಬಹುತೇಕ ಕವಿಯೇತರರೂ ಧಾರವಾಡಕ್ಕೆ ಅಪರಿಚಿತರೂ ಆದವರೇ ಮಾಡಿದರೆ ಅದು ಕವಿಯ ಮನೆಯ ಮೇಲೆ ಬೀಳಲೂಬಹುದು ಎಂದು ಸಂಶೋಧಿಸಿಯೂ ಸಮಾಧಾನ ಮಾಡಿಕೊಂಡು ಸುಮ್ಮನಾಗಿದ್ದ. ಆದರೀ ಮಾತಿನ ಮಟ್ಟಿಗೆ ಈತನಿಗೆ ಗೊಂದಲಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಹೋಗುತ್ತಿದ್ದವು. ಈ ಈತನ ಇಂಥ ಅಡ್ಡಾಟಗಳು, ಕವಿಗೋಷ್ಠಿಗೆ ಹೋಗುವುದು, ಹರಟೆ ಗಿರಟೆ ಚರ್ಚೆ ಗಿರ್ಚೆ ಅಂತ ಟೈಮು ಸೋರಿ ಹೋಗುತ್ತಿರಬೇಕಾದರೆ... ಅರ್ಥಾತ್ ಆತನ ಬಿಜಿ ಶೆಡ್ಯೂಲ್‌ನಿಂದಾಗಿ ದೂಳು ಹಾಳು ಅಂತಾ ಅಷ್ಟಿಷ್ಟಾದರೂ ಆತನ ರೂಮೆಂಬೋ ಮಹಾನೆಲೆಯಲ್ಲಿ ಹೊದ್ದು ಹಾಸಿಕೊಂಡಿರುತ್ತಿತ್ತು. ತನ್ನ ರೂಮಿನಲ್ಲಿ ಬಿದ್ದಿರುತ್ತಿದ್ದ ಈ ದೂಳನ್ನೇ ತನ್ನ ಸಂಶೋಧನೆಯ ಮೊದಲ ಪಾಯಿಂಟಾಗಿ ತೆಗೆದುಕೊಂಡು ಅಂದರೆ ‘ಎಳೆ ಹಿಡಕೊಂಡೇ ಹಚಡಾ ನುಂಗಲು..!’ ಮುಂದಾದ. ದೂಳು ಬಿದ್ದರೂ ಅದು ಈ ನೆಲದ್ದೇ ಆಗಿದ್ದುದರಿಂದ, ಮಣ್ಣು ಮತ್ತು ಕಲ್ಲಿನ ನೆಂಟನೇ ಆಗಿದ್ದುದರಿಂದ, ‘ಕಲ್ಲು ಬೀಳದಿದ್ದರೇನಾಯಿತು, ಮಣ್ಣಾದರೂ ಬಿದ್ದಿತಲ್ಲ, ಅದಷ್ಟೇ ಸಾಕು, ನಾನೊಬ್ಬ ಕವಿಯೆಂದು ಸಾಬೀತು ಮಾಡಲು’ ಎಂದು ತಾತ್ಕಾಲಿಕ ಖುಷಿಗೊಳಗಾದ.

ಕಲ್ಲು–ಮಣ್ಣು–ದೂಳು... ಇವೆಲ್ಲ ಒಂದನ್ನು ಬಿಟ್ಟು ಒಂದಿರಲಾರದಷ್ಟು ಈ ನೆಲದ ಗಟ್ಟಿಯಾದ ನೆಂಟರೇ ಆಗಿರುವುದರಿಂದ ದೂಳು ಮನೆ ಮೇಲಾಗಲೀ ಒಳಗಾಗಲೀ ಬಿದ್ದಿರುವುದಕ್ಕೂ ನಿಗೂಢಾರ್ಥಗಳಿವೆ ಎಂಬುದನ್ನು ಆತನ ಸಮ್‌ಶೋಧನಾ ಮನಸ್ಸು ಅರಿತುಕೊಳ್ಳಲಾಗಿ, ಕೊನೆಗೂ ತನ್ನ ರೂಮಿನ ಮೇಲೆ ಈ ಕಲ್ಲು ಬೀಳದಿರುವ ಸಂಗತಿಯ ಹಿಂದಿನ ಮೂರು ಮುಖ್ಯ ಕಾರಣಗಳು ಒಂದು ದಿನ ಆತನ ಕವಿಮನಕ್ಕೆ ಪಕ್ಕಾ ಆಗಿಯೇ ಬಿಟ್ಟವು! ಅವುಗಳಲ್ಲಿ ಒಂದು: ‘ಅದು ಮನೆಯಲ್ಲ ಕೇವಲ ರೂಮು...’ ; ಎರಡು: ‘ಆ ರೂಮಿರುವ ಬಿಲ್ಡಿಂಗು ನನ್ನ ಸ್ವಂತದ್ದಲ್ಲ, ಬೇರೆಯ ಮಾಲೀಕರದ್ದು..’ ; ಮತ್ತು ಮೂರು: ‘ಕಲ್ಲುಗಳೇ ಬೀಳಬೇಕೆಂದರೆ ಆ ಕಲ್ಲುಗಳಷ್ಟು ಗಟ್ಟಿಯಾದ ಕಾವ್ಯ ಅಥವಾ ಕನ್ನಡ ಉಳಿದಿರುವವತನಕವೂ ಉಳಿದಿರಲೇಬೇಕಾದ ಸಾಹಿತ್ಯ ನನ್ನಿಂದ ಉದ್ಭವವಾಗದೇ ಇದ್ದದ್ದು..!’ – ಈ ಮುಖ್ಯ ಮೂರು ಕಾರಣಗಳನ್ನು ಕಂಡು ಹಿಡಿದ ಅಥವಾ ಶೋಧಿಸಿದ ಖುಷಿಯಲ್ಲಿ ‘ಯೂರೇಕಾ..!’ ಎಂದು ಗಟ್ಟಿಯಾಗಿಯೂ ಭಯಾನಕವಾಗಿಯೂ ಆಗಿ ಚೀರಿಕೊಂಡ. ಆಗ ರಾತ್ರಿ ಎರಡುಗಂಟೆಯ ಸಮಯವಾಗಿದ್ದುದರಿಂದ ಯಾರಿಗೂ ಕೇಳಲೂ ಇಲ್ಲ; ಯಾರೂ ಏಳಲೂ ಇಲ್ಲ. ಅವತ್ತು ನಿದ್ದೆಯೂ ಆತನ ಹತ್ತಿರ ಸುಳಿಯಲಿಲ್ಲ.

ಬೆಳಗಾಗುವುದನ್ನೇ ಕಾದ ಈತ ತನ್ನ ರೂಮಿಗೆ ಹತ್ತಿರದ ಸಪ್ತಾಪುರ–ಜಯನಗರದಲ್ಲಿಯೇ ಮನೆಮಾಡಿಕೊಂಡಿರುವ ಯೂನಿವರ್ಸಿಟಿಯ ಕನ್ನಡ ವಿಭಾಗದ ಮುಖ್ಯಸ್ಥರೂ, ಹೆಸರಾಂತ ಕವಿ ಕಮ್ ಸಂಶೋಧಕರೊಬ್ಬರನ್ನು ಧೈರ್ಯದಿಂದಲೇ ಭೇಟಿ ಮಾಡಿ ಗೇಟಿನ ಈಚೆ ನಿಂತುಕೊಂಡೇ ತನ್ನ ಮಹಾಕನಸನ್ನು ಹೀಗೆ ಬಿನ್ನವಿಸಿಕೊಂಡ, ‘ಸರ್ರ ನಮಸ್ಕಾರ್ರೀ... ಈಗ ಸದ್ಯ ನಾ ಬಿ.ಎ. ಓದಾಕ ಹತ್ತೇನ್ರೀ. ಮುಂದೆ ಎಂ.ಎ. ಮಾಡಿ ಆದ ನಂತರ ನಿಮ್ಮಲ್ಲೇ ಈ ವಿಷಯವಾಗಿ (ಆತ ಸಂಶೋಧನೆಯ ಪಾಯಿಂಟ್‌ಗಳನ್ನು ಬರೆದಿಟ್ಟುಕೊಂಡ ನೋಟ್‌ಬುಕ್ಕನ್ನು ಅವರ ಕೈಗಿಟ್ಟು) ನಾನು ಪಿಎಚ್. ಡಿ. ಮಾಡಬೇಕಂತ ನಿರ್ಧಾರ ಮಾಡೇನ್ರೀ ಸರ್ರ..!’.

ಈತನ ಮಾತಿಗೆ ಒಮ್ಮಿಲೇ ಗಾಬು ಹೊಡೆದು ನಿಂತುಕೊಂಡ ಆ ಪ್ರೊಫೇಶ್ವರರು, ನಿಧಾನ ಸಾವರಿಸಿಕೊಂಡು, ಏನನ್ನೋ ಲೆಕ್ಕಾಚಾರ ಹಾಕಿ, ಅತನನ್ನು ಮನೆಯೊಳಗೆ ಬಿಟ್ಟುಕೊಂಡು, ಅವರ ಶ್ರೀಮತಿಯವರನ್ನೂ ಕರೆದು ಪರಿಚಯಿಸಿಕೊಟ್ಟು, ಬಿಸಿಬಿಸಿ ಚಾ ತರಿಸಿಕೊಟ್ಟು ಅಪಾರ ಕಾಳಜಿ ಮಾಡಿದರು. ‘ಈ ತೆರನಾದ ಮರ್ಯಾದೆಯನ್ನು ಗೌರವವನ್ನು ತಾನು ಧಾರವಾಡಕ್ಕೆ ಬಂದಾದ ಮೇಲೆ ಪಡೆದುಕೊಂಡದ್ದು ಇದೇ ಮೊದಲು, ಅದೂ ಕನ್ನಡದ ಹೆಸರಾಂತ ಸಾಹಿತಿಗಳೊಬ್ಬರ ಮನೆಯಲ್ಲಿ!’ – ಅಗಾಧ ಖುಷಿಯಲ್ಲಿ ತೇಲಹತ್ತಿದ.

ಆ ಪ್ರೊಫೇಶ್ವರರು ‘ತಮ್ಮಾ, ಯಾವೂರಪಾ ನಿಂದು... ನಿನ್ನ ಉತ್ಸಾಹ ನೋಡಿ ನಂಗ ಭಾಳ ಖುಷಿಯಾತು...’ ಇತ್ಯಾದಿ ವಿಚಾರಿಸುತ್ತ ಆತನನ್ನು ಇಹಲೋಕಕ್ಕೆ ತಂದರು. ಕುರ್ಚಿಯ ಮೇಲೆ ಅದುರುತ್ತಲೇ ತುದಿಗುಂಡಿಯಲ್ಲಿ ಬಿಗಿದುಕುಂತಿದ್ದ ಈತ ಮಾತಾನಾಡುತ್ತ ಹೋದಂತೆ ಸ್ವಲ್ಪ ನಿರಾಳವಾಗಿ ಕುತುಕೊಂಡ. ಒಳಗಡೆ ಈ ಹಿರಿಯ ಸಾಹಿತಿಗಳ ಶ್ರೀಮತಿಯವರು ಪ್ರೊಫೇಶ್ವರರಿಗೆ ಒಳಗೆ ಬರಲು ಹೇಳಿ ಪತಿಯ ಕಿವಿಯಲ್ಲೇನೋ ಕಿಸಿಪಿಸಿಗುಟ್ಟಿದರು. ಹೊರಗೆ ಬಂದ ಹಿರಿಯರು, ‘ತಮ್ಮಾ... ಈ ಚೀಟಿ ತಗೋ... ಸ್ವಲ್ಪ ಮಾರ್ಕೆಟ್‌ಗೆ ಹೋಗಿ ಈ ಸಾಮಾನ್‌ಗೋಳ್ನ ತಗೊಂಬಾ...’ ಅಂತಾ ಹೇಳಿ ಒಂದಷ್ಟು ದುಡ್ಡು ಮತ್ತು ಖಾಲಿ ಕೈಚೀಲವನ್ನು ಕೊಟ್ಟರು. ತನ್ನ ಕನಸು ನನಸು ಮಾಡಲೆಂದೇ ಉದ್ಭವಿಸಿ ಬಂದಂತೆ ಕಂಡ ಈ ಮಹಾನುಭಾವರು ಏನು ಹೇಳಿದರೂ ಮಾಡಲು ತಯಾರಾಗಿಯೇ ಬಿಟ್ಟಿದ್ದ ಈ ಮರಿಕವಿಗಳು ನಡೆದುಕೊಂಡೇ ಮಾರುಕಟ್ಟೆಗೆ ಹೊರಟುಬಿಟ್ಟದ್ದು ನೋಡಿ ಪ್ರೊಫೇಶ್ವರ ಮಹಾರಾಜರು ಬಾಗಿಲಲ್ಲೇ ನಿಂತುಕೊಂಡು ಮುಗುಳ್ನಗುತ್ತಿದ್ದರು. ■

## ಆಸ್ತಿ!

ಕೆಲವರಿಗೆ ನವೆಂಬರ್‌ನಲ್ಲಿ
ಕನ್ನಡ ಪ್ರೇಮ
ಜಾಸ್ತಿ.
ಏಕೆಂದರೆ,
ಅವರಿಗೆ ಅದೇ
ಆಸ್ತಿ!

– ಡಿ ಎಂ. ಹೆಗಡೆ

## ನ(ವ)ಂಬರ್ ಕನ್ನಡಿಗ

ಕೆಲವರು
ನಂಬರ್ ಒನ್
ಕನ್ನಡಿಗರು,
ಕೆಲವರು
ನವಂಬರ್
ಕನ್ನಡಿಗರು!

–ಬಾಲು ಪಟಗಾರ

## ಸ್ವೀಟು

ಹುಡುಗ ಹುಡುಗಿಯ
ಮನೆಗೆ ಬಂದು ಹೇಳಿದ
ನಿಮ್ಮ ಮಗಳು
ತುಂಬಾ ತುಂಬಾ ಸ್ವೀಟು
ಹೆತ್ತವರು ಕೇಳಿದರು
ನಿನಗೆ ಹೇಗೆ ಗೊತ್ತಾಯ್ತು?

–ಕಾಸರಗೋಡು ಅಶೋಕ್ ಕುಮಾರ್

## ಕನ್ನಡ ಭಾಷೆ

ಎಂಟು ಜ್ಞಾನಪೀಠ
ಪಡೆದು,
ಎಲ್ಲಾ ಭಾಷೆಗೆ
ಹೊಡೆದಿದೆ
ಸಡ್ಡು,
ಆದರೂ ಕನ್ನಡ
ಮಾತನಾಡಲು
ಯಾಕೆ ಅಸಡ್ಡೆ?

–ಬಾಲು ಪಟಗಾರ